ಇಲಾಖೆ / ವಿಷಯ: DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER :    ದಿನಾಂಕ : DATE : 28/11/19

# ತಿರುಪತಿಯಲ್ಲಿ ವಿವಿಐಪಿ ಲಾಂಜ್ ಸ್ಥಾಪನೆಗೆ ಕೇಂದ್ರ ಸಂಪುಟ ಒಪ್ಪಿಗೆ

- ಲಾಂಜ್‌ಗಾಗಿ 19,375 ಚದುರಡಿ ಜಾಗ ನೀಡಲು ಸಂಪುಟ ಸಭೆ ನಿರ್ಧಾರ
- ತಿರುಪತಿ ವಿಮಾನ ನಿಲ್ದಾಣದಲ್ಲೇ ಐಶಾರಾಮಿ ಲಾಂಜ್ ನಿರ್ಮಾಣ

**ನವದೆಹಲಿ:** ತಿರುಪತಿಗೆ ಆಗಮಿಸುವ ಗಣ್ಯ ಹಾಗೂ ಗಣ್ಯಾತಿಗಣ್ಯ ವ್ಯಕ್ತಿಗಳಿಗಾಗಿ, ತಿರುಪತಿ ವಿಮಾನ ನಿಲ್ದಾಣದಲ್ಲಿ ವಿಶೇಷ ಲಾಂಜ್ ಸ್ಥಾಪಿಸುವ ಉದ್ದೇಶಕ್ಕಾಗಿ, 19,375 ಚದರಡಿ ಜಾಗವನ್ನು ವಿಮಾನ ನಿಲ್ದಾಣಕ್ಕೆ ನೀಡುವ ಪ್ರಸ್ತಾವನೆಗೆ ಬುಧವಾರ, ಪ್ರಧಾನಿ ನರೇಂದ್ರ ಮೋದಿಯವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ (ಎಎಐ) ಸೇರಿರುವ ಈ ಭೂಮಿಯನ್ನು, ವರ್ಷಕ್ಕೆ 1 ರೂ. ಬಾಡಿಗೆಯಂತೆ ಮುಂದಿನ 15 ವರ್ಷದವರೆಗೆ ಆಂಧ್ರಪ್ರದೇಶದ ಶಿಕ್ಷಣ ಮತ್ತು ಕಲ್ಯಾಣ ಮೂಲಸೌಕರ್ಯ ಇಲಾಖೆಗೆ (ಎಪಿಇಡಬ್ಲ್ಯುಐಡಿಸಿ) ಹಸ್ತಾಂತರಿಸಲಾಗುತ್ತದೆ. ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಿರುವ ಈ ಜಾಗದಲ್ಲಿ, ಐಷಾರಾಮಿ ಸೌಲಭ್ಯಗಳುಳ್ಳ ಲಾಂಜ್ ನಿರ್ಮಾಣ ಹಾಗೂ ಅದರ ನಿರ್ವಹಣೆಯ ಜವಾಬ್ದಾರಿಯನ್ನು ಎಪಿಇಡಬ್ಲ್ಯುಐಡಿಸಿ ಹೊರಲಿದೆ.

**ಇತರ ನಿರ್ಧಾರಗಳು:** ಭಾರತೀಯ ಆಹಾರ ನಿಗಮದಲ್ಲಿ (ಎಫ್‌ಸಿಐ), ಕೇಂದ್ರ ಸರ್ಕಾರ ಹೂಡಿರುವ ಅಧಿಕೃತ ಬಂಡವಾಳ ಮಿತಿಯನ್ನು ಈವರೆಗೆ ಇದ್ದ 3,500 ಕೋಟಿ ರೂ.ಗಳಿಂದ 10,000 ಕೋಟಿ ರೂ.ಗಳಿಗೆ ಏರಿಸುವ ಪ್ರಸ್ತಾವನೆಗೂ ಸಂಪುಟ ಒಪ್ಪಿಗೆ ನೀಡಿದೆ. ಇನ್ನು, 2020-21ರ ಆರ್ಥಿಕ ವರದಿಯನ್ನು ನೀಡುವ ಹೊಣೆ ಹೊತ್ತಿರುವ 15ನೇ ಆರ್ಥಿಕ ಆಯೋಗಕ್ಕೆ ನೀಡಲಾಗಿರುವ ಗಡುವನ್ನು 2020ರ ಅ. 30ರವರೆಗೆ ವಿಸ್ತರಿಸಲು ಸಂಪುಟ ಒಪ್ಪಿದೆ.